ಮೆ: ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೆಟ್ ಲಿಮಿಟೆಡ್, ಇವರು ಬೆಳಗಾವಿ ಜಿಲ್ಲೆ, ರಾಯಬಾಗ ತಾಲ್ಲೂಕ, ಅಳಗವಾಡಿ ಗ್ರಾಮದ ಸರ್ವೆ ನಂ: 106/2ಪಿ, 106/3, 109/1 ಮತ್ತು 109/3 ರಲ್ಲಿ ಹೊಸದಾಗಿ 60 ಕೆಎಲ್‌ಪಿಡಿ ಸಾಮರ್ಥ್ಯದ ಜ್ಯೂಸ್ ಮತ್ತು ಸಿರಫ್ ಒಳಗೊಂಡ ಡಿಸ್ಟಿಲರಿ, 6 ಟಿಪಿಡಿ ಬಯೋ ಸಿಎನ್‌ಜಿ, 20 ಟಿಪಿಡಿ ಫರ್ಟಿಲೈಸರ್ ಪೌಡರ್, 42 ಟಿಪಿಡಿ ಇಂಗಾಲದ ಡೈಆಕ್ಸೈಡ್ ಉತ್ಪಾದನೆ ಮತ್ತು ಘಂಟೆಗೆ 3 ಮೆಗಾ ವ್ಯಾಟ್ ಉತ್ಪಾದನಾ ಸಾಮರ್ಥ್ಯದ ಕೋಜನರೇಷನ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಹಿನ್ನೆಲೆಯಲ್ಲಿ ನಡೆದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

ದಿನಾಂಕ : 26-06-2020.

ವೇಳೆ : ಬೆಳಿಗ್ಗೆ 11:00 ಘಂಟೆ.

ಸ್ಥಳ : ಮೆ: ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೆಟ್ ಲಿಮಿಟೆಡ್, ಸರ್ವೆ ನಂ: 106/2ಪಿ, 106/3, 109/1 ಮತ್ತು 109/3 ಅಳಗವಾಡಿ ಗ್ರಾಮ, ರಾಯಬಾಗ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಮೆ: ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೆಟ್ ಲಿಮಿಟೆಡ್, ಇವರು ಬೆಳಗಾವಿ ಜಿಲ್ಲ, ರಾಯಬಾಗ ತಾಲ್ಲೂಕ, ಅಳಗವಾಡಿ ಗ್ರಾಮದ ಸರ್ವೆ ನಂ: 106/2ಪಿ, 106/3, 109/1 ಮತ್ತು 109/3 ರಲ್ಲಿ ಹೊಸದಾಗಿ 60 ಕೆಎಲ್‌ಪಿಡಿ ಸಾಮರ್ಥ್ಯದ ಜ್ಯೂಸ್ ಮತ್ತು ಸಿರಫ್ ಒಳಗೊಂಡ ಡಿಸ್ಟಿಲರಿ, 6 ಟಿಪಿಡಿ ಬಯೋ ಸಿಎನ್‌ಜಿ, 20 ಟಿಪಿಡಿ ಫರ್ಟಿಲೈಸರ್ ಪೌಡರ್, 42 ಟಿಪಿಡಿ ಇಂಗಾಲದ ಡೈಆಕ್ಸೈಡ್ ಉತ್ಪಾದನೆ ಮತ್ತು ಘಂಟೆಗೆ 3 ಮೆಗಾ ವ್ಯಾಟ್ ಉತ್ಪಾದನಾ ಸಾಮರ್ಥ್ಯದ ಕೋಜನರೇಷನ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 26-06-2020 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೆಟ್ ಲಿಮಿಟೆಡ್, ಸರ್ವೆ ನಂ: 106/2ಪಿ, 106/3, 109/1 ಮತ್ತು 109/3 ಅಳಗವಾಡಿ ಗ್ರಾಮ, ರಾಯಬಾಗ ತಾಲ್ಲೂಕ, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : | ಅನುಬಂಧ-6 |
| ಕಾರ್ಖಾನೆಯ ಪ್ರತಿನಿಧಿಗಳು ಸಾರ್ವಜನಿಕರ ಅಹವಾಲಿಗೆ ನೀಡಿದ ಲಿಖಿತ ಉತ್ತರ | : | ಅನುಬಂಧ-7 |

ಪೀಠಿಕೆ:

ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ಭಾರತ ಸರಕಾರ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಮತ್ತು ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರು ಸದರಿ ಯೋಜನೆಯ Terms of Reference ಅನ್ನು ದಿನಾಂಕ 25-02-2020 ರಂದು ಅಂತಿಮಗೊಳಿಸಿ ಅದರಂತೆ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಾಯ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಸದರಿ ಯೋಜನೆ (ಟಿ ಓ ಆರ್) ಅನ್ನು ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು **ಮೆ: ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೇಟ್ ಲಿಮಿಟೆಡ್, ಸರ್ವೆ ನಂ: 106/2ಪಿ, 106/3, 109/1 ಮತ್ತು 109/3 ಅಳಗವಾಡಿ ಗ್ರಾಮ, ರಾಯಬಾಗ ತಾಲ್ಲೂಕ, ಬೆಳಗಾವಿ ಜಿಲ್ಲೆ** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 27-02-2020ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಉದ್ದೇಶಿತ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ **"ಕನ್ನಡ ಪ್ರಭಾ"** (ಕನ್ನಡ) ,**"ದಿ ಟೈಮ್ಸ್ ಆಫ್ ಇಂಡಿಯಾ"** (ಆಂಗ್ಲ) ಭಾಷೆಯಲ್ಲಿ ದಿನಾಂಕ: 26-05-2020ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ **"ವಿಜಯ ಕರ್ನಾಟಕ"** (ಕನ್ನಡ) ಪತ್ರಿಕೆಯಲ್ಲಿ ದಿನಾಂಕ: 28-05-2020ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 26-06-2020 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು **ಶ್ರೀ ಅಶೋಕ ದುಡಗುಂಟಿ,** ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, **ಶ್ರೀ. ವಿಜಯಕುಮಾರ ಕಡಕಬಾವಿ,** ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಧಾರವಾಡ, ಮತ್ತು ರಾಯಬಾಗ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಏಳು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಎನ್ವಿರಾನ್ಮೆಂಟಲ್ ಹೆಲ್ತ್ & ಸೇಫ್ಟಿ ಕನ್ಸಲ್ಟಂಟ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ ಶಿದ್ದಪ್ಪಾ ನಾಗನೂರ, ಹಾರೂಗೇರಿ:**

ಮಧುಸೂಧನರವರು ಈ ಘಟಕ ಪ್ರಾರಂಭಿಸುವುದರಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಅದಕ್ಕೆ ಕೈಗೊಳ್ಳತಕ್ಕಂತಹ ಕ್ರಮಗಳ ಬಗ್ಗೆ ಸೂಕ್ಷ್ಮವಾಗಿ ಹೇಳಿದ್ದಾರೆ. ಈ ಕಾರ್ಖಾನೆ ನಮ್ಮಲ್ಲಿ ಪ್ರಾರಂಭಿಸುವುದರಿಂದ ರೈತರಿಗೆ ಬಹಳ ಅನೂಕೂಲಕರವಾಗಲಿದೆ. ಏಕೆಂದರೆ ಈ ಒಂದೆ ಇವರ ಜಾಗರಿ ಫ್ಯಾಕ್ಟರಿಗೆ ನಮ್ಮ ಭಾಗಕ್ಕೆ ಮಳೆ ಇಲ್ಲದೆ ಇದ್ದಾಗ ಒಣಗಿದ ಕಬ್ಬು ಒಯ್ಯೋದು, ಸರಿಯಾದ ಸಮಯಕ್ಕೆ ಬಿಲ್ಲು ಕೊಟ್ಟು ರೈತರಿಗೆ ಸಹಾಯ ಮಾಡಿದ್ದಾರೆ. ಈ ಕಾರ್ಖಾನೆ ಇರುವುದರಿಂದ ನಮ್ಮ ರೈತರ ವರ್ಗ ಸುತ್ತ ಮುತ್ತಲಿನ ರೈತರ ವರ್ಗ ಬಹಳಷ್ಟು ನೆಮ್ಮದಿಯಿಂದ ಬದುಕುತ್ತಿದ್ದಾರೆ. ಹಾರೂಗೇರಿ, ರಾಯಬಾಗ ಅಥವಾ ಅಳಗವಾಡಿಯಿಂದಾಗಲಿ ಪರಿಸರ ಮಾಲಿನ್ಯದ ಸಲುವಾಗಿ ನಿಮ್ಮ ಕಛೇರಿಗೆ ಯಾವುದೇ ದೂರು ಬಂದಿಲ್ಲಾ. ಅದಕ್ಕೆ ಈ ಕಾರ್ಖಾನೆಗೆ ಪರವಾನಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪರಿಸರ ಮಾಲಿನ್ಯ ನಿಯಂತ್ರಣ ಅಧಿಕಾರಿಗಳು ಈ ಕಾರ್ಖಾನೆಗೆ ಪರವಾನಿಗೆಯನ್ನು ಕೊಟ್ಟು ಈ ಘಟಕವನ್ನು ಸ್ಥಾಪನೆ ಮಾಡಿದ್ದಾದರೆ, ಎರಡು ನೂರು ಕುಟುಂಬಗಳ ಜೀವನ ಸಾಗುತ್ತದೆ ಹಾಗೂ ಸಾವಿರಾರು ರೈತರ ಬದುಕು ಸಾಗುತ್ತದೆ. ಈ ಕಾರ್ಖಾನೆಯಿಂದ ಬಹಳಷ್ಟು ಜನ ರೈತರಿಗೆ ಉಪಯೋಗ ಆಗಿದೆ. ಇನ್ನಷ್ಟು ಉತ್ಪನ್ನಗಳನ್ನು ತಯಾರಿಸುವುದರಿಂದ ಅನೇಕ ಸಂಸಾರಗಳಿಗೆ ಅನುಕೂಲವಾಗುತ್ತದೆ. ದಯವಿಟ್ಟು ಈ ಉದ್ದಿಮೆಗೆ ಪರವಾನಿಗೆ ಕೊಡಬೇಕೆಂದು ಹೇಳಿದರು.

2. **ಶ್ರೀ ಬಸಪ್ಪ ಮೋರಡಿ, ಶಿರಗೂರ ಗ್ರಾಮ:**

ಇವತ್ತು ಈ ಆಸ್ಕಿನ ಫ್ಯಾಕ್ಟರಿಗೆ ನನಗೆ ಒಂದು ಅನ್ಯೋನ್ಯ ಬಾಂಧವ್ಯ ಇದೆ ಅಂತಾ ಹೇಳಬಹುದು, ಏಕೆಂದರೆ ಈ ಮಾಲೀಕರು ನಾನು ಈ ಪ್ರಥಮದಲ್ಲಿ ಜಾಗರಿ ಪ್ರಾರಂಭಿಸಬೇಕಾದರೆ, ದಕ್ಷಿಣ ಭಾಗಕ್ಕೆ ಎಲ್ಲಾ ತಿರುಗಾಡಿ ಒಂದು ಯೋಜನೆ ಹಾಕಿಕೊಂಡೆ ಪ್ರಾರಂಭಿಸಿದ್ದೆವು. ಈ ಫ್ಯಾಕ್ಟರಿಯನ್ನು ಪ್ರಾರಂಭಿಸಿ ಈ ಮಟ್ಟಕ್ಕೆ ಬೆಳೆಸಿಕೊಂಡು ಬಹಳ ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಕಾರ್ಖಾನೆಯವರು ಇವತ್ತು ಅನೇಕ ಘಟಕಗಳನ್ನು ಪ್ರಾರಂಭಿಸುತ್ತಿದ್ದಾರೆ ಅದಕ್ಕಾಗಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಅವಶ್ಯಕತೆ ಇರುತ್ತದೆ. ಆದ್ದರಿಂದ ಜನರ ಅಭಿಪ್ರಾಯ ಕೇಳಲು ಈ ಸಭೆಯನ್ನು ಏರ್ಪಡಿಸಿದ್ದಾರೆ. ಈ ಪರಿಸರ ಎನಿದೆ ಇದು ಮಾನವನ ಅವಿಭಾಜ್ಯ ಅಂಗ ನಾವು ಪರಿಸರ ಬಿಟ್ಟಿಲ್ಲಾ, ಪರಿಸರ ಬಿಟ್ಟು ಬದುಕುಲು ಸಾಧ್ಯವಿಲ್ಲಾ. ಅದಕ್ಕೆ ನಾವು ಪರಿಸರವನ್ನು ರಕ್ಷಿಸಬೇಕು, ಆ ಕಾರಣಕ್ಕಾಗಿ ಹೆಚ್ಚು ಗಿಡಗಳನ್ನು ನೆಡಬೇಕು, ಇದರಿಂದ ಅಕ್ಕ-ಪಕ್ಕದ ಇಡೀ ರಾಯಬಾಗ ತಾಲ್ಲೂಕಿಗೆ ಅಷ್ಟೆ ಅಲ್ಲಾ, ಎರಡು-ಮೂರು ತಾಲ್ಲೂಕಿಗೆ ಸಾಕಷ್ಟು ಉಪಯೋಗ ಇದೆ ಮತ್ತು ಲಾಭವೂ ಇದೆ. ಈ ಯೋಜನೆಗೆ ಸಂಬಂಧಪಟ್ಟಂತೆ, ಪರಿಸರಕ್ಕೆ ಸಂಬಂಧಪಟ್ಟಂತೆ ಪರಿಸರ ಮಾಲಿನ್ಯ ಕಾಪಾಡುವುದರಲ್ಲಿ ನಮ್ಮೆಲ್ಲರ ಕರ್ತವ್ಯ ಇದೆ. ಇದಕ್ಕೆ ನಮ್ಮೆಲ್ಲರ ಸಹಕಾರ ಇರುತ್ತದೆ. ಅದಕ್ಕೆ ಈ ಕಂಪನಿಯವರಿಗೆ ಅನುಮತಿ ಕೊಡಬೇಕೆಂದು ಮತ್ತೊಮ್ಮೆ ವಿನಂತಿಸಿಕೊಂಡರು.

3. **ಶ್ರೀ ರಾವಸಾಬ ಪಾಟೀಲ, ಗುಂಡವಾಡ ಗ್ರಾಮ:**

ಪರಿಸರ ಇಲಾಖೆಯವರು ಈ ಕಾರ್ಖಾನೆಗೆ ಅನುಮತಿ ಕೊಟ್ಟರೆ, ಈ ಭಾಗದ ರಾಯಬಾಗ ತಾಲ್ಲೂಕ ಹಾಗೂ ಅಥಣಿ ತಾಲ್ಲೂಕಿಗೆ ಒಳ್ಳೆಯದಾಗುತ್ತದೆ. ನಾನು ಮನವಿ ಮಾಡುವುದೆನೆಂದರೆ ಈ ಕಾರ್ಖಾನೆ ಪ್ರಾರಂಭಿಸುವುದರಿಂದ ಈ ಭಾಗದ ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂದು ತಿಳಿಸಿದರು.

4. **ಶ್ರೀ ವಿವೇಕ ನಾರಗೊಂಡ, ಹಾರೂಗೇರಿ:**

ಆಕ್ಸೀನ್‌ರವರು ಹಾಕಿಕೊಂಡಿರುವ ಈ ಪ್ರೋಜೆಕ್ಟ ಒಂದು ಸಂತೋಷದ ವಿಷಯ ಹಾಗೂ ಹಾರೂಗೇರಿ ಭಾಗಕ್ಕೆ ಶ್ಲಾಘನೀಯ ವಿಷಯ. ಏಕೆಂದರೆ ಒಬ್ಬ ಸಾಮಾನ್ಯ ರೈತನ ಮಗ ಇಂಥದೊಂದು ಪ್ರೋಜೆಕ್ಟ ಮಾಡುತ್ತಿದ್ದಾರೆ ಅಂದರೆ ಬಹಳ ಖುಷಿ ವಿಷಯ. ಇಲ್ಲಿಯವರಿಗೆ ವಿವರಣೆ ಕೊಟ್ಟ ಹಾಗೆ, ಆಕ್ಸೀನ್ ಕುಟುಂಬದವರಲ್ಲಿ ಒಂದು ವಿನಂತಿ ಏನೆಂದರೆ ಪರಿಸರಕ್ಕೆ ಯಾವ ರೀತಿಯಿಂದಲೂ ತೊಂದರೆಯಾಗದಂತೆ ವಿವರಿಸಿದ್ದೀರೊ ಅದೇ ತರಹ ಮಾಡಬೇಕು. ಹೆಚ್ಚು ಗಿಡಗಳನ್ನು ನೆಡುವಂತಹಾ ಕೆಲಸವಾಗಬೇಕು ಹಾಗೂ ಅಂತರ್ಜಲಕ್ಕೆ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು. ಈ ಭಾಗದಲ್ಲಿ ಉದ್ಯೋಗ ಸೃಷ್ಠಿಯಾಗುವಂತಹ ಕೆಲಸ ಮಾಡುತ್ತಿದ್ದಾರೆ, ಅದಕ್ಕೆ ತಮ್ಮಲ್ಲಿ ವಿನಂತಿಯೆಂದರೆ ದಯವಿಟ್ಟು ಈ ಪ್ರೋಜೆಕ್ಟಗೆ ಪರವಾನಿಗೆ ಕೊಡಬೇಕೆಂದು ಕೇಳಿದರು.

**ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಧಾರವಾಡ** ಇವರು ಮಾತನಾಡುತ್ತಾ ಮೆ: ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೆಟ್ ಲಿಮಿಟೆಡ್ ರವರು ಈ ಒಂದು ಪ್ರದೇಶದಲ್ಲಿ 60 KLPD ಅಂದರೆ ಒಂದು ದಿನಕ್ಕೆ 60000 liter ethanol (ಕಬ್ಬಿನ ರಸದಿಂದ ನೇರವಾಗಿ ಮಾಡುವಂತಹ) ಡಿಸ್ಟಿಲರಿ ಯೋಜನೆ ಹಾಗೂ ಅದರಲ್ಲಿ ಒಂದು ದಿನಕ್ಕೆ 6 ಟನ್‌ಗಳಷ್ಟು ಬಯೋಗ್ಯಾಸ್, 20 ಟನ್‌ಗಳಷ್ಟು ರಸಗೊಬ್ಬರ organic compost ಹಾಗೂ 42 ಟನ್‌ಗಳಷ್ಟು carbon dioxide ಅದರ ಜೊತಗೆ 3 ಮೆಗಾ ವ್ಯಾಟ್ ಸಹ ವಿದ್ಯುತ್ ಉತ್ಪಾದನೆ ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟಕೊಂಡು ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಗಳಿಗೆ ಸರ್ಕಾರದ ಮಟ್ಟದಲ್ಲಿ ಅನುಮತಿ ಪಡೆಯಬೇಕಾಗಿದ್ದು ಅಂದರೆ ಭಾರತ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯದ ಗೇಜಟ್ ನೋಟಿಫಿಕೇಶನ್ 14-09-2006 ಗೆ EIA Notification ಪ್ರಕಾರ ಪರಿಸರ ಪರಿಸರ ವಿಮೋಚಾನಾ ಪತ್ರವನ್ನು ಪಡೆಯುವುದು ಕಡ್ಡಾಯವಾಗಿದೆ. ಈ ಹಿನ್ನಲೆಯಲ್ಲಿ ಅದನ್ನು ಪಡೆಯಬೇಕೆಂದರೆ ಅವರು ಒಂದು Impact Assessment studies ಅಂತಾ ಮಾಡಬೇಕಾಗಿರುತ್ತದೆ. ಆ Impact Assessment studies ಪೂರ್ತಿಯಾಗಿ ಮಾಡಬೇಕಾದರೆ ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಿ ಸಾರ್ವಜನಿಕ ಅಭಿಪ್ರಾಯವನ್ನು ಪಡೆದುಕೊಂಡು, ಅದನ್ನು ಕ್ರೋಢೀಕರಿಸಿ ವರದಿಯನ್ನು ಸರ್ಕಾರದ ಮಟ್ಟಕ್ಕೆ ಸಲ್ಲಿಸಿದಾಗ ಅದನ್ನ ಪರಿಗಣಿಸಿ/ಪರಿಶೀಲಿಸಿ ಅವರಿಗೆ ಪರಿಸರ ವಿಮೋಚನಾ ಪತ್ರವನ್ನು ನೀಡಬೇಕಾಗುತ್ತದೆ. ಆ ಹಿನ್ನಲೆಯಲ್ಲಿ ನಾವು ತಮ್ಮೆಲ್ಲರ ಅಭಿಪ್ರಾಯವನ್ನು ಪಡೆಯಲು ಇವತ್ತು ಪರಿಸರ ಸಾರ್ವಜನಿಕ ಸಭೆಯನ್ನು ಏರ್ಪಾಡು ಮಾಡಿದ್ದೀವಿ. ಈ ವಿಷಯ 30 ದಿವಸ ಮುಂಚಿತವಾಗಿ ದಿನಪತ್ರಿಕೆ ಮುಖಾಂತರ ಪ್ರಕಟಣೆ ಮಾಡಿ ಈ ಜಾಗದಲ್ಲಿ ಪರಿಸರ ಕುರಿತು ಸಾರ್ವಜನಿಕ ಸಭೆಯನ್ನು ಮಾಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಯಾವ-ಯಾವ ಕಛೇರಿಗಳಲ್ಲಿ ಇಡಲಾಗಿತ್ತು ಎನ್ನುವದರ ಬಗ್ಗೆ ನಮ್ಮ ಪರಿಸರ ಅಧಿಕಾರಿಗಳಾದ ಶ್ರೀ ಜಗದೀಶವರು ತಮಗೆ ಈಗಾಗಲೇ ಮನವರಿಕೆ ಮಾಡಿದ್ದಾರೆ.

ಈ 30 ದಿನಗಳಲ್ಲಿ ನಮಗೆ ಲಿಖಿತ ರೂಪದಲ್ಲಿ ನೀಡಲು ಆಗಲಿಲ್ಲದವರೂ ಸಹ ಈ ಒಂದು ಸಭೆಯಲ್ಲಿ ಭಾಗವಹಿಸಿ ಅಭಿಪ್ರಾಯಗಳನ್ನು ನಿರ್ಭಯವಾಗಿ, ನಿರ್ಭೀತಿಯಿಂದ ಈ ಸಭೆಯ ಮುಖಾಂತರ ತಿಳಿಸಬೇಕು ಎನ್ನುವ ಮುಖ್ಯವಾದ ಉದ್ದೇಶ ಈ ಪರಿಸರ ಸಾರ್ವಜನಿಕ ಸಭೆಯದ್ದಾಗಿರುತ್ತದೆ. ಏಕೆಂದರೆ ಇಲ್ಲಿ ತಾವು ಎಲ್ಲರೂ ಏನು ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತೀರಿ ಆ ಅಭಿಪ್ರಾಯಗಳ ಬಗ್ಗೆ video recording ಹಾಗೂ audio recording ಆಗುತ್ತಿರುತ್ತದೆ. ಇವೆಲ್ಲವನ್ನು ನಾವು ಗಮನದಲ್ಲಿ ಇಟ್ಟುಕೊಂಡು ನೀವು ಹೇಳುವುದೆಲ್ಲವನ್ನೂ ಸಹ ನಾವು ನಡುವಳಿಗಳ (proceeding) ಮೂಲಕ ಸರ್ಕಾರಕ್ಕೆ ಕಳಿಸುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಯಾವುದೇ ಅನ್ಯಭಾವನೆಗಳಿಗೆ ಅವಕಾಶ ನೀಡದೆ ತಮ್ಮ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಬೇಕು. ಈ ಹಿನ್ನಲೆಯಲ್ಲಿ ಈಗಾಗಲೆ ನಮ್ಮ ಮೆ॥ ಅಸ್ಕಿನ್ ಬಯೋಫ್ಯೂಲ್ಸ್ ಪ್ರೈವೆಟ್ ಲಿಮಿಟೆಡ್‌ನವರು ಪರಿಸರ ಮಾಲಿನ್ಯದ ಬಗ್ಗೆ ಮತ್ತು ಅದನ್ನ ಯಾವ ರೀತಿಯಾಗಿ ಅವರು ನಿರ್ವಹಣೆ ಮಾಡಲಿಕ್ಕೆ ಕ್ರಮಗಳನ್ನು ಕೈಗೊಳ್ಳುವ ಉದ್ದೇಶ ಹೊಂದಿದ್ದಾರೆ ಎನ್ನುವುದರ ಬಗ್ಗೆ ಸವಿಸ್ತಾರವಾಗಿ ತಮಗೆ power point presentation ಮುಖಾಂತರ ಈಗಾಗಲೆ ತಿಳಿಸಿರುತ್ತಾರೆ. ಅದನ್ನ ಗಮನಿಸಿ ಸುಮಾರು ನಾಲ್ಕು ಜನ ಸ್ಥಳೀಯರು/ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ

ಪಡಿಸಿರುತ್ತಾರೆ. ಸಿದ್ದಪ್ಪಾ ನಾಗನೂರರವರು, ಬಸಪ್ಪಾ ಮೋರಡಿಯವರು, ರಾವಸಾಹೇಬ ಪಾಟೀಲ ಹಾಗೂ ವಿವೇಕ ನಾರಗೊಂಡ ಇವರೆಲ್ಲರ ಅಭಿಪ್ರಾಯ, ಈ ಉದ್ದಿಮೆ ಬೇಗನೆ ಸ್ಥಾಪನೆಯಾಗಬೇಕು. ಈ ಉದ್ದಿಮೆ ಇಲ್ಲಿ ಬಂದರೆ ಈ ಭಾಗದ ಜನರ ಆರ್ಥಿಕ ಮಟ್ಟ ಸುಧಾರಣೆ ಆಗುತ್ತದೆ ಮತ್ತು ಸ್ಥಳೀಯರಿಗೆ ಉದ್ಯೋಗಾವಕಾಶ ಸಿಗುತ್ತದೆ. ಅದಕ್ಕೆ ಆದಷ್ಟು ಬೇಗನೆ ಪರವಾನಿಗೆ ನೀಡಿ, ಉದ್ದಿಮೆ ಸ್ಥಾಪನೆಯಾಗಲಿಕ್ಕೆ ಕಾರಣವಾಗಬೇಕು ಎನ್ನುವ ಅನಿಸಿಕೆಯನ್ನ ವ್ಯಕ್ತಪಡಿಸಿದ್ದೀರಿ. ಮುಖ್ಯವಾಗಿ ನಾವು ಈ ಪರಿಸರ ಕುರಿತು ಸಾರ್ವಜನಿಕ ಸಭೆಯನ್ನು ಏರ್ಪಾಟ ಮಾಡಿರುವುದು ಈ ಒಂದು ಉದ್ದಿಮೆಯಿಂದ ಮುಂದೆ ಉಂಟಾಗತಕ್ಕಂತಹ ಪರಿಸರ ಮಾಲಿನ್ಯದ ಬಗ್ಗೆ ಹಾಗೂ ಉದ್ದೇಶಿತ ಉದ್ದಿಮೆ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಸಂಗ್ರಹಿಸುವುದಾಗಿರುತ್ತದೆ. ಈ ಒಂದು ಸಭೆಯ ಉದ್ದೇಶವೇನೆಂದರೆ ಉದ್ದಿಮೆಯಿಂದ ಮುಂದೆ ಉಂಟಾಗುವಂತಹ ಮಾಲಿನ್ಯವನ್ನು ತಡೆಗಟ್ಟಲು ಅವರು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಉದ್ದೇಶ ಇಟ್ಟಕೊಂಡಿದ್ದಾರೆ, ಆ ಉದ್ದೇಶಗಳು ಸರಿ ಇರುತ್ತವಾ, ಸರಿ ಇರಲ್ವಾ ಯಾವ ರೀತಿ ಮಾಡುತ್ತಾರೆ ಎನ್ನುವ ನಿಮ್ಮ ಅಭಿಪ್ರಾಯಗಳು ಏನಾದರು ಇದ್ದರೆ ಅದನ್ನ ವ್ಯಕ್ತಪಡಿಸಬೇಕಿತ್ತು, ಈ ಸಭೆಯ ಮೂಲಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಸರ್ಕಾರ ಮಟ್ಟಕ್ಕೆ ತಿಳಿಸುವ ಒಂದು ಮುಖ್ಯ ಜವಾಬ್ದಾರಿಯೂ ಇರುತ್ತದೆ. ಸಭೆಯಲ್ಲಿ ಭಾಗವಹಿಸಿದ ನಾಲ್ಕು ಜನರು ವ್ಯಕ್ತ ಪಡಿಸಿದ ಅಭಿಪ್ರಾಯಗಳನ್ನು ಕ್ರೂಢೀಕರಿಸಿಕೊಂಡು, ಇದರ ಬಗ್ಗೆ ಒಂದು ನಡುವಳಿಗಳನ್ನು (proceeding) ಮಾಡಿ ಸರ್ಕಾರದ ಮಟ್ಟಕ್ಕೆ ಕಳುಹಿಸಲು ವ್ಯವಸ್ಥೆ ಮಾಡುತ್ತೇವೆ ಎಂದು ಸಭೆಗೆ ತಿಳಿಸಿದರು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

(ಶ್ರೀ. ಅಶೋಕ ದುಡಗುಂಟಿ. ಕ.ಆ.ಸೇ.)

**ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು ಬೆಳಗಾವಿ, ಕರ್ನಾಟಕ**